# CFTRI launches special nutrition programme

## It will help severely acute malnourished children in Mysuru

**SPECIAL CORRESPONDENT**
MYSURU

The CSIR-Central Food Technological Research Institute (CFTRI), Mysuru, has launched a nutrition intervention initiative aimed at improving the nutritional status of Severely Acute Malnourished (SAM) children in Mysuru district. The project has been launched in collaboration with the Department of Women and Child Development, Government of Karnataka, and Spirulina Foundation, Tumakuru.



ZP CEO A.M. Yogeesh distributing a nutrition kit to the mother of a child in need of supplements, in Mysuru on Tuesday. CSIR-CFTRI Director Sridevi Annapurna Singh and others were present. ▪SPECIAL ARRANGEMENT

About 140 SAM children identified by the district administration will be given weekly packs of nutrition supplements such as spirulina chikki, high protein biscuits, high protein rusks, energy food along with sesame paste (burfi), fortified mango bar etc., for a period of six months. The children will be served with one of these supplements every day to enhance their macro and micronutrient status.

The programme was launched by distributing weekly packs of supplements to children by the chief guest, Yogeesh, CEO, Mysuru Zilla Panchayat, on the CFTRI premises on Monday. In his address, he said the programme is a right step in addressing malnutrition in the district. He also sought intervention in the case of Moderately Acute Malnourished (MAM) children whose numbers are around 5,000 in the district, in the days ahead.

Sridevi A. Singh, Director, CSIR-CFTRI, outlined the implementation of a similar kind of nutritional intervention by the institute for 250 anganwadi children in Nanjangud taluk in 2016-17.

Mahesh, Founder Director, Spirulina Foundation; K H Prasad, DHO, Mysuru; M S Jayanth, RCHO, Mysuru; Basavaraj, Deputy Director, Women and Child Development Department; and Alok Kumar Srivastava, Chief Scientist, CSIR-CFTRI, spoke.

# 140 CHILDREN TO GET WEEKLY NUTRITION PACK

**EXPRESS NEWS SERVICE**
@ Mysuru

To improve the nutritional status of the severely acute malnourished (SAM) children in the district, CSIR-CFTRI in association with the women and child development department and Spirulina Foundation launched a nutrition intervention initiative.

As many as 140 SAM children identified by the district administration will be provided with weekly packs consisting of selected nutrition supplements such as Spirulina Chikki, high protein biscuits, high protein rusks, energy food along with sesame paste (burfi), fortified mango bar etc. for a period of six months.

The children will be served with one of these supplements every day to enhance their macro and micronutrient status.

The programme was launched by distributing the weekly packs to selected children in the presence of parents by Yogeesh, Mysuru ZP CEO.

Yogeesh expressed confidence that with proactive measures by both state government departments and CSIR-CFTRI, this programme would be a right step in addressing malnutrition in the district.

He also urged to undertake the case of moderately acute malnourished (MAM) children, which numbers around 5,000 in the district.

CSIR-CFTRI director Dr Sridevi A Singh outlined the successful implementation of a similar kind of nutrition interventions by the institute for 250 anganwadi children in Nanjangud taluk in 2016-17 and commented that the programme could be replicated in other districts with mobilisation of adequate resources by government through the CSR channel.

ಎರಡು ಕಿ.ಮೀವರೆಗೆ ಕನಿಷ್ಠ ಹಾಗೂ ಪ್ರತಿ ಕಿಲೋಮೀಟರ್‌ಗೆ ₹ ಎಂದು ಅವರು ಮನವಿ ಮಾಡಿದರು.

**ಮಕ್ಕಳಲ್ಲಿನ ಅಪೌಷ್ಟಿಕತೆ ಸಮಸ್ಯೆ ನೀಗಿಸಲು ಉಪಕ್ರಮ**

# ಸಿಎಫ್‌ಟಿಆರ್‌ಐನಿಂದ ಪೌಷ್ಟಿಕ ಆಹಾರ

ಪ್ರಜಾವಾಣಿ ವಾರ್ತೆ

ಮೈಸೂರು: ಜಿಲ್ಲೆಯಲ್ಲಿ ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಪೋಷಕಾಂಶಯುಕ್ತ ಆಹಾರ ಒದಗಿಸುವ ಉಪಕ್ರಮವೊಂದನ್ನು ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆ (ಸಿಎಫ್‌ಟಿಆರ್‌ಐ) ಆರಂಭಿಸಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ತುಮಕೂರಿನ ಸ್ಪಿರುಲಿನಾ ಫೌಂಡೇಷನ್ ಸಹಯೋಗದೊಂದಿಗೆ ಈ ಯೋಜನೆ ರೂಪಿಸಿದ್ದು, ಅಪೌಷ್ಟಿಕತೆ ಸಮಸ್ಯೆ ಎದುರಿಸುತ್ತಿರುವ ಮಕ್ಕಳಿಗೆ ಆರು ತಿಂಗಳ ಅವಧಿಗೆ ಪೋಷಕಾಂಶಭರಿತ ಆಹಾರ ದೊರೆಯಲಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಮೈಸೂರು ಜಿಲ್ಲೆಯಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವ 140 ಮಕ್ಕಳನ್ನು ಗುರುತಿಸಿದೆ. ಅವರಿಗೆ ನಿರ್ದಿಷ್ಟ ಪೋಷಕಾಂಶವುಳ್ಳ ಆಹಾರದ ಕಿಟ್‌ಅನ್ನು ಸಿಎಫ್‌ಟಿಆರ್‌ಐ ನೀಡಲಿದೆ. ಸ್ಪಿರುಲಿನಾ ಚಿಕ್ಕಿ, ಪೋಷಕಾಂಶಭರಿತ ಬಿಸ್ಕತ್ ಹಾಗೂ ರಸ್ಕ್, ಎಳ್ಳಿನ ಮಿಠಾಯಿ (ಬರ್ಫಿ) ಮತ್ತು ಮ್ಯಾಂಗೋ ಬಾರ್‌ಗಳನ್ನು ಈ ಕಿಟ್ ಒಳಗೊಂಡಿರಲಿದೆ.



ಜಿಲ್ಲಾ ಪಂಚಾಯಿತಿ ಸಿಇಒ ಎ.ಎಂ.ಯೋಗೀಶ್ ಅವರು ಪೌಷ್ಟಿಕಾಂಶಯುಕ್ತ ಆಹಾರದ ಕಿಟ್ ವಿತರಿಸಿದರು. ಡಾ.ಶ್ರೀದೇವಿ ಅನ್ನಪೂರ್ಣಸಿಂಗ್, ಡಾ.ಎಂ.ಎಸ್. ಜಯಂತ್ ಇದ್ದಾರೆ

‘ಸಿಎಸ್‌ಐಆರ್– ಸಿಎಫ್‌ಟಿಆರ್‌ಐ 2016-17 ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನಲ್ಲಿ ಪೌಷ್ಟಿಕಾಂಶಯುಕ್ತ ಆಹಾರ ಪೂರೈಸುವ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿತ್ತು. ಅಂದು ಅಂಗನವಾಡಿಯ 250 ಮಕ್ಕಳಿಗೆ ಆಹಾರ ಪೂರೈಸಲಾಗಿತ್ತು’ ಎಂದು ಸಂಸ್ಥೆಯ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣಸಿಂಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಮುಖ್ಯಾಂಶಗಳು**

- **ಮಕ್ಕಳಿಗೆ ಆರು ತಿಂಗಳು ವಿತರಣೆ**
- **ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಹಯೋಗ**
- **ಸ್ಪಿರುಲಿನಾ ಚಿಕ್ಕಿ, ಪೋಷಕಾಂಶಯುಕ್ತ ಬಿಸ್ಕತ್ ವಿತರಣೆ**

**ಸಿಎಫ್‌ಟಿಆರ್‌ಐನ ಉಪಕ್ರಮವು ಮೈಸೂರು ಜಿಲ್ಲೆಯಲ್ಲಿ ಮಕ್ಕಳಲ್ಲಿನ ಅಪೌಷ್ಟಿಕತೆಯ ಸಮಸ್ಯೆ ನೀಗಿಸಲು ನೆರವಾಗಲಿದೆ.**

**ಎ.ಎಂ.ಯೋಗೀಶ್,** ಜಿ.ಪಂ ಸಿಇಒ

‘ಸರ್ಕಾರವು ಸಿಎಸ್‌ಆರ್ ನಿಧಿ ಬಳಸಿ ಇಂತಹ ಕಾರ್ಯಕ್ರಮಕ್ಕೆ ಬೆಂಬಲ ನೀಡಿದರೆ, ಇತರ ಜಿಲ್ಲೆಗಳಿಗೂ ವಿಸ್ತರಿಸಬಹುದು’ ಎಂದು ಅವರು ಅಭಿಪ್ರಾಯಪಟ್ಟರು.

ಮಕ್ಕಳ ಪೋಷಕರಿಗೆ ಆಹಾರದ ಕಿಟ್‌ಗಳನ್ನು ವಿತರಿಸಿ ಯೋಜನೆಗೆ ಚಾಲನೆ ನೀಡಲಾಯಿತು. ಈ ವೇಳೆ ಮಾತನಾಡಿದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎ.ಎಂ.ಯೋಗೀಶ್, ‘ಜಿಲ್ಲೆಯಲ್ಲಿ ಈಗ ತೀವ್ರ ತೆರನಾದ ಅಪೌಷ್ಟಿಕತೆಯಿಂದ ಬಳಲುತ್ತಿರುವ 140 ಮಕ್ಕಳು ಇದ್ದರೆ, ಸುಮಾರು 5 ಸಾವಿರ ಮಕ್ಕಳು ಸಾಧಾರಣ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಅವರ ಮೇಲೂ ಕಾಳಜಿ ವಹಿಸಬೇಕಿದೆ. ಮುಂದಿನ ದಿನಗಳಲ್ಲಿ ಅಂತಹ ಮಕ್ಕಳನ್ನೂ ಈ ಯೋಜನೆಯಡಿ ಸೇರಿಸುವುದು ಉತ್ತಮ’ ಎಂದು ಹೇಳಿದರು.

ಸ್ಪಿರುಲಿನಾ ಫೌಂಡೇಷನ್ ಸಂಸ್ಥಾಪಕ ನಿರ್ದೇಶಕ ಮಹೇಶ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ. ಎಚ್.ಪ್ರಸಾದ್, ಆರ್‌ಸಿಎಚ್‌ಒ ಡಾ.ಎಂ.ಎಸ್.ಜಯಂತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕ ಬಸವರಾಜ್, ಸಿಎಫ್‌ಟಿಆರ್‌ಐ ಹಿರಿಯ ವಿಜ್ಞಾನಿ ಡಾ.ಅಲೋಕ್ ಕುಮಾರ್ ಶ್ರೀವಾಸ್ತವ, ಡಾ.ರಮೇಶ್ ಕುಮಾರ್, ಅನಿತಾ ಪಾಲ್ಗೊಂಡರು.

# ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ

# ಪೋಷಕಾಂಶಯುಕ್ತ ಆಹಾರ ಪೂರೈಸಲು ಸಿಎಫ್‌ಟಿಆರ್‌ಐ ಯೋಜನೆ



ಮೈಸೂರು, ಡಿ.7(ಎಸ್‌ಬಿಡಿ)– ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆ(ಸಿಎಫ್‌ಟಿಆರ್‌ಐ) ಪೋಷಕಾಂಶಯುಕ್ತ ಆಹಾರ ತಿನಿಸು ವಿತರಿಸುವ ಯೋಜನೆ ಆರಂಭಿಸಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ತುಮಕೂರಿನ ಸ್ಪಿರುಲಿನಾ ಫೌಂಡೇಷನ್ ಸಹಯೋಗದೊಂದಿಗೆ ಈ ಯೋಜನೆ ರೂಪಿಸಲಾಗಿದ್ದು, ಮೈಸೂರು ಜಿಲ್ಲೆಯಲ್ಲಿ ಗುರುತಿಸಲಾಗಿರುವ 140 ಮಕ್ಕಳಿಗೆ 6 ತಿಂಗಳ ಕಾಲ ಪೋಷಕಾಂಶಯುಕ್ತ ಸ್ಪಿರುಲಿನಾ ಚಿಕ್ಕಿ, ಬಿಸ್ಕತ್, ರಸ್ಕ್, ಎಳ್ಳಿನ ಮಿಠಾಯಿ (ಬರ್ಫಿ) ಹಾಗೂ ಮ್ಯಾಂಗೋ ಬಾರ್‌ಗಳನ್ನು ವಿತರಿಸಲಾಗುತ್ತದೆ.

ಸಿಎಫ್‌ಟಿಆರ್‌ಐ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಮಕ್ಕಳ ಪೋಷಕರಿಗೆ ಆಹಾರದ ಕಿಟ್ ವಿತರಿಸಿ ಮಾತನಾಡಿದ ಮೈಸೂರು ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎ.ಎಂ.ಯೋಗೀಶ್, ಜಿಲ್ಲೆಯಲ್ಲಿ ಪ್ರಸ್ತುತ ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ 140 ಮಕ್ಕಳನ್ನು ಗುರುತಿಸಲಾಗಿದೆ. ಅಲ್ಲದೆ ಸಾಧಾರಣ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ 5 ಸಾವಿರಕ್ಕೂ ಹೆಚ್ಚಿದೆ. ಈಗಲೇ ನಿಗಾ ವಹಿಸದಿದ್ದರೆ ಇವರನ್ನೂ ತೀವ್ರ ಅಪೌಷ್ಟಿಕತೆ ಬಾಧಿಸುವ ಆತಂಕವಿದೆ. ಹಾಗಾಗದಂತೆ ಮುಂದಿನ ದಿನಗಳಲ್ಲಿ ಅಪೌಷ್ಟಿಕತೆಯಿರುವ ಎಲ್ಲಾ ಮಕ್ಕಳನ್ನೂ ಈ ಯೋಜನೆಯಡಿ ಸೇರಿಸಬೇಕಿದೆ ಎಂದು ತಿಳಿಸಿದರು.

ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣಸಿಂಗ್ ಮಾತನಾಡಿ, 2016–17ರಲ್ಲಿ ನಂಜನಗೂಡು ತಾಲೂಕಿನಲ್ಲಿ ಪೌಷ್ಟಿಕಾಂಶಯುಕ್ತ ಆಹಾರ ಪೂರೈಸುವ ಕಾರ್ಯಕ್ರಮ ನಡೆಸಲಾಗಿತ್ತು. ಅಂಗನವಾಡಿಯ ಸುಮಾರು 250 ಮಕ್ಕಳಿಗೆ ಆಹಾರ ವಿತರಿಸುವಲ್ಲಿ ಸಂಸ್ಥೆ ಯಶಸ್ವಿಯಾಗಿತ್ತು. ಸಿಎಸ್‌ಆರ್ ನಿಧಿ ಬಳಕೆಯೊಂದಿಗೆ ಇಂತಹ ಕಾರ್ಯಕ್ರಮ ನಡೆಸಲು ಸರ್ಕಾರ ಬೆಂಬಲ ನೀಡಿದರೆ ಬೇರೆ ಜಿಲ್ಲೆಗಳಿಗೂ ಯೋಜನೆ ವಿಸ್ತರಿಸಬಹುದು ಎಂದು ಆಶಯ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಾಯಕ ನಿರ್ದೇಶಕ ಬಸವರಾಜ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಎಚ್.ಪ್ರಸಾದ್, ಆರ್‌ಸಿಎಚ್‌ಒ ಡಾ.ಎಂ.ಎಸ್.ಜಯಂತ್, ಸ್ಪಿರುಲಿನಾ ಫೌಂಡೇಷನ್ ಸಂಸ್ಥಾಪಕ ನಿರ್ದೇಶಕ ಮಹೇಶ್, ಸಿಎಫ್‌ಟಿಆರ್‌ಐ ಹಿರಿಯ ವಿಜ್ಞಾನಿ ಡಾ.ಅಲೋಕ್ ಕುಮಾರ್ ಶ್ರೀವಾಸ್ತವ, ಮಾಹಿತಿ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಡಾ.ರಮೇಶ್ ಕುಮಾರ್, ತಾಂತ್ರಿಕ ಅಧಿಕಾರಿ ಅನಿತಾ ಮತ್ತಿತರರು ಪಾಲ್ಗೊಂಡಿದ್ದರು.